## ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.

## ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

## 2025–26ನೇ ಸಾಲು : 9ನೇ ತರಗತಿ – ಸಾಮರ್ಥ್ಯಗಳ ಪಟ್ಟಿ :

| ಸಾಮರ್ಥ್ಯಗಳ ಸಂಖ್ಯೆ | ಸಾಮರ್ಥ್ಯಗಳು | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಮೂಲವಸ್ತು, ಸಂಯುಕ್ತ ವಸ್ತು, ಶುದ್ಧ ಮತ್ತು ಅಶುದ್ಧ ವಸ್ತುಗಳನ್ನು ಗುರುತಿಸಿ ವರ್ಗೀಕರಿಸುವರು. | 2 |
| 2 | ಲೋಹ, ಅಲೋಹಗಳನ್ನು ಗುರುತಿಸಿ ಅವುಗಳ ವ್ಯತ್ಯಾಸಗಳನ್ನು ಪಟ್ಟಿ ಮಾಡುವರು. | 2 |
| 3 | ಪರಮಾಣು ಮತ್ತು ಅಣುಗಳ ರಚನೆಯನ್ನು ಅರ್ಥೈಸುವರು. | 3 |
| 4 | ಬೆಳೆಯ ಉತ್ಪಾದನೆಯ ವಿವಿಧ ಪದ್ಧತಿಗಳನ್ನು ತಿಳಿಯುವರು. | 2 |
| 5 | ಜೀವಕೋಶದ ರಚನೆ ಮತ್ತು ಕಾರ್ಯಗಳನ್ನು ತಿಳಿಯುವರು. | 2 |
| 6 | ಸಸ್ಯ ಜೀವಕೋಶ ಮತ್ತು ಪ್ರಾಣಿ ಜೀವಕೋಶಗಳ ವ್ಯತ್ಯಾಸ ಗಳನ್ನು ಅರ್ಥೈಸುವರು. | 2 |
| 7 | ಬಲ, ಒತ್ತಡ ಅರ್ಥೈಸುವಿಕೆ, ಬಲ ಮತ್ತು ಒತ್ತಡದ ಪರಿಣಾಮಗಳನ್ನು ವಿವರಿಸುವರು. | 2 |
| 8 | ಕೆಲಸದ ಅರ್ಥ ಹಾಗೂ ವಿವರಣೆ, ಶಕ್ತಿ ಸಂರಕ್ಷಣಾ ನಿಯಮವನ್ನು ವಿವರಿಸುವರು. | 3 |
| 9 | ಶಬ್ದ ಉಂಟಾಗುವಿಕೆ, ಶಬ್ದದ ಗುಣಲಕ್ಷಣಗಳನ್ನು ತಿಳಿಯುವರು. | 2 |
| ಒಟ್ಟು ಪ್ರಶ್ನೆಗಳು | | 20 |

## ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.
## 2025–26ನೇ ಸಾಲು – ಪೂರ್ವ ಪರೀಕ್ಷೆ 9ನೇ ತರಗತಿ

ವಿದ್ಯಾರ್ಥಿಯ ಹೆಸರು : ದಿನಾಂಕ :

1. ನಿಮ್ಮ ನಿತ್ಯ ಜೀವನದಲ್ಲಿ ಬಳಸುವ ಸಂಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ.

---

---

2. ಈ ಕೆಳಗಿನ ಧಾತುಗಳ ಸಂಕೇತಗಳನ್ನು ಬರೆಯಿರಿ.

ಆಕ್ಸಿಜನ್ – ತಾಮ್ರ –

3. ಲೋಹಗಳ ಎರಡು ಗುಣಲಕ್ಷಣಗಳನ್ನು ತಿಳಿಸಿ.

---

---

4. ಆಹಾರ ಪೊಟ್ಟಣ ಕಟ್ಟಲು ಅಲ್ಯೂಮಿನಿಯಂನ ತೆಳು ಹಾಳೆ ಬಳಸುವರು. ಇದಕ್ಕೆ ಕಾರಣವಾದ ಲೋಹದ ಗುಣವನ್ನು ಹೆಸರಿಸಿ.

---

5. ಈ ಕೆಳಗಿನವುಗಳಲ್ಲಿ ಧನ ಆವೇಶ ಹೊಂದಿರುವ ಪರಮಾಣುವಿನ ಘಟಕವನ್ನು ಗುರುತಿಸಿ.

**a)** ಪ್ರೋಟಾನ್ **b)** ನ್ಯೂಟ್ರಾನ್ **c)** ಇಲೆಕ್ಟ್ರಾನ್ **d)** ನ್ಯೂಕ್ಲಿಯಸ್

---

6. ಪರಮಾಣು ಎಂದರೇನು? ---

---

---

7. ನೀರು ಮತ್ತು ಕಾರ್ಬನ್ ಡೈಆಕ್ಸೈಡ್ನ ಅಣುಸೂತ್ರ ಬರೆಯಿರಿ.

---

8. ಕಳೆ ಎಂದರೇನು? ---

---

9. ಬೀಜಗಳನ್ನು ಬಿತ್ತಲು ಬಳಸುವ ಸಾಧನವನ್ನು ತಿಳಿಸಿ. ---

10. ಜೀವಕೋಶ ಎಂದರೇನು?

---

---

11. ಜೀವಕೋಶದ ಪ್ರೋಟೀನ್ ಕಾರ್ಖಾನೆ ಯಾವುದು?

12. ಅತ್ಯಂತ ಉದ್ದನೆಯ ಜೀವಕೋಶವನ್ನು ಹೆಸರಿಸಿ.

13. ಕೋಶ ಭಿತ್ತಿ ಎಂದರೇನು?

14. ಬಲದ ಪರಿಣಾಮಗಳನ್ನು ಪಟ್ಟಿಮಾಡಿ.

15. ಗುರುತ್ವಾಕರ್ಷಣ ಬಲ ಎಂದರೇನು?

16. ಶಕ್ತಿ ಎಂದರೇನು?

17. ಕೆಲಸದ ಅಂತರಾಷ್ಟ್ರೀಯ ಏಕಮಾನ ತಿಳಿಸಿ.

18. ಒಬ್ಬ ವ್ಯಕ್ತಿ ಸೈಕಲ್ ಸವಾರಿ ಮಾಡುತ್ತಿದ್ದಾನೆ. ಇಲ್ಲಿ ಆಗುತ್ತಿರುವ ಶಕ್ತಿಯ ರೂಪಾಂತರ ತಿಳಿಸಿ.

19. ಮಾನವನಲ್ಲಿ ಶಬ್ದವು ಹೇಗೆ ಉತ್ಪತ್ತಿಯಾಗುತ್ತದೆ?

20. ಶಬ್ದ ಮಾಲಿನ್ಯದ ಪರಿಣಾಮ ತಿಳಿಸಿ

**ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.**

**9ನೇ ತರಗತಿ – ಪೂರ್ವ ಪರೀಕ್ಷೆ : ಮಾದರಿ ಉತ್ತರಗಳು**

---

1. ಸಂಯುಕ್ತ ವಸ್ತುಗಳು – ನೀರು, ಸೋಡಾ, ಉಪ್ಪು, ಸಕ್ಕರೆ.
2. ಆಕ್ಸಿಜನ್ – O     ತಾಮ್ರ – Cu
3. ಲೋಹದ ಲಕ್ಷಣಗಳು : – ಲೋಹಗಳು ಹೊಳೆಯುತ್ತವೆ     – ಲೋಹಗಳು ವಿದ್ಯುತ್ ವಾಹಕಗಳು
   – ಲೋಹಗಳು ಉಷ್ಣದ ವಾಹಕಗಳು   – ಲೋಹಗಳು ಶಬ್ದವನ್ನು ಉಂಟು ಮಾಡುತ್ತವೆ.
4. ಕುಟ್ಯತೆ(ಪತ್ರಶೀಲತೆ) – ಲೋಹಗಳ ಮೇಲೆ ಒತ್ತಡ ಹಾಕಿ ಅವುಗಳನ್ನು ತೆಳು ಹಾಳೆಗಳಾಗಿ ಮಾಡುವ ಗುಣ.
5. ಧನ ಆವೇಶವುಳ್ಳ ಕಣ – ಪ್ರೋಟಾನ್
6. ಪರಮಾಣು : ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಧಾತುವಿನ ಅತ್ಯಂತ ಸೂಕ್ಷ್ಮ ಕಣವೇ ಪರಮಾಣು.
7. ನೀರು – $H_2O$     ಕಾರ್ಬನ್ ಡೈಆಕ್ಸೈಡ್ – $CO_2$
8. ಕಳೆ – ಜಮೀನಿನಲ್ಲಿ ಬೆಳೆಗಳ ಜೊತೆಗೆ ಬೆಳೆಯುವ ಅನಗತ್ಯ ಸಸ್ಯಗಳಿಗೆ ಕಳೆ ಎನ್ನುವರು.
9. ಬೀಜಗಳನ್ನು ಬಿತ್ತಲು ಬಳಸುವ ಸಾಧನವೇ – ಕೂರಿಗೆ
10. ಜೀವಕೋಶ – ಜೀವಗಳ ರಚನಾತ್ಮಕ ಮತ್ತು ಕಾರ್ಯಾತ್ಮಕ ಮೂಲ ಘಟಕವೇ ಜೀವಕೋಶ.
11. ಜೀವಕೋಶದ ಪ್ರೋಟೀನ್ ಕಾರ್ಖಾನೆ – ರೈಬೋಸೋಮ್
12. ಅತ್ಯಂತ ಉದ್ದನೆಯ ಜೀವಕೋಶ – ನರಕೋಶ (ನ್ಯೂರಾನ್)
13. ಕೋಶಭಿತ್ತಿ : ಸಸ್ಯ ಜೀವಕೋಶದಲ್ಲಿ ಕೋಶಪೊರೆಯ ಮೇಲೆ ಕಂಡುಬರುವ ಇನ್ನೊಂದು ಪೊರೆಯೇ ಕೋಶಭಿತ್ತಿ.
14. ಬಲದ ಪರಿಣಾಮ : ವಸ್ತುವಿನ ಮೇಲೆ ಪ್ರಯೋಗವಾಗುತ್ತಿರುವ ಬಲವು ಅದರ ಚಲನೆಯ ಸ್ಥಿತಿ ಮತ್ತು ಅದರ ಆಕಾರದ ಬದಲಾವಣೆಗೆ ಕಾರಣವಾಗುತ್ತದೆ.
15. ಗುರುತ್ವಾಕರ್ಷಣ ಬಲ : ಭೂಮಿಯ ವಸ್ತುಗಳನ್ನು ತನ್ನೆಡೆಗೆ ಸೆಳೆಯುವ ಬಲವನ್ನು ಗುರುತ್ವಾಕರ್ಷಣ ಬಲ ಎನ್ನುವರು.
16. ಶಕ್ತಿ : ಕೆಲಸ ಮಾಡಲು ಬೇಕಾಗುವ ಸಾಮರ್ಥ್ಯವೇ ಶಕ್ತಿ.
17. ಕೆಲಸದ ಅಂತರಾಷ್ಟ್ರೀಯ ಏಕಮಾನ – ಜೌಲ್ (J)
18. ಇಲ್ಲಿ ಸ್ನಾಯು ಶಕ್ತಿಯು ಸೈಕಲ್ಗೆ ವರ್ಗಾವಣೆಯಾಗಿ ಯಾಂತ್ರಿಕ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ.
19. ಮಾನವನಲ್ಲಿ ಧ್ವನಿತಂತುಗಳ ಕಂಪನಗಳಿಂದ ಶಬ್ದ ಉತ್ಪತ್ತಿಯಾಗುತ್ತದೆ.
20. ಶಬ್ದ ಮಾಲಿನ್ಯದ ಪರಿಣಾಮ : ನಿದ್ರಾಹೀನತೆ, ಅತಿಯಾದ ರಕ್ತದೊತ್ತಡ, ಆತಂಕ ಮುಂತಾದ ಅಸ್ವಸ್ಥತೆಗಳು ಉಂಟಾಗುತ್ತದೆ.

**ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.**

**2025–26ನೇ ಸಾಲು – ಸಾಫಲ್ಯ ಪರೀಕ್ಷೆ 9ನೇ ತರಗತಿ**

ವಿದ್ಯಾರ್ಥಿಯ ಹೆಸರು : ದಿನಾಂಕ :

1. ನಿಮ್ಮ ನಿತ್ಯ ಜೀವನದಲ್ಲಿ ಬಳಸುವ ಮೂಲವಸ್ತುಗಳನ್ನು ಹೆಸರಿಸಿ. ------------------------------

---------------------------------------------------------------------------

2. ಈ ಕೆಳಗಿನ ಧಾತುಗಳ ಸಂಕೇತಗಳನ್ನು ಬರೆಯಿರಿ. ನೈಟ್ರೋಜನ್ – ಕಬ್ಬಿಣ –

3. ಸೋಡಿಯಂನ್ನು ಸೀಮೆಎಣ್ಣೆಯಲ್ಲಿ ಸಂಗ್ರಹಿಸಲು ಕಾರಣ ತಿಳಿಸಿ.

---------------------------------------------------------------------------

---------------------------------------------------------------------------

4. ಲೋಹಗಳು ಆಮ್ಲದೊಂದಿಗೆ ವರ್ತಿಸಿ ಬಿಡುಗಡೆಯಾಗುವ ಅನಿಲವನ್ನು ತಿಳಿಸಿ. ---------------------

5. ಈ ಕೆಳಗಿನವುಗಳಲ್ಲಿ ಆವೇಶ ರಹಿತ ಪರಮಾಣುವಿನ ಘಟಕವನ್ನು ಗುರುತಿಸಿ.

**a)** ಪ್ರೋಟಾನ್ **b)** ನ್ಯೂಟ್ರಾನ್ **c)** ಇಲೆಕ್ಟ್ರಾನ್ **d)** ನ್ಯೂಕ್ಲಿಯಸ್

---------------------------------------------------------------------------

6. ಅಣು ಎಂದರೇನು? ---------------------------------------------------------

---------------------------------------------------------------------------

7. ನೈಟ್ರಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲದ ಅಣುಸೂತ್ರ ಬರೆಯಿರಿ.

ನೈಟ್ರಿಕ್ ಆಮ್ಲ – ಸಲ್ಫ್ಯೂರಿಕ್ ಆಮ್ಲ –

8. ಆಧುನಿಕ ನೀರಾವರಿ ಪದ್ಧತಿಗಳನ್ನು ಹೆಸರಿಸಿ.

---------------------------------------------------------------------------

9. ರಾಸಾಯನಿಕ ಗೊಬ್ಬರದ ಎರಡು ಅನಾನುಕೂಲಗಳನ್ನು ತಿಳಿಸಿ.

---------------------------------------------------------------------------

---------------------------------------------------------------------------

---------------------------------------------------------------------------

10. ಜೀವಕೋಶದ "ಶಕ್ತಿ ಉತ್ಪಾದನಾ ಕೇಂದ್ರ" ಯಾವುದು? ಮತ್ತು ಏಕೆ?

---------------------------------------------------------------------------

---------------------------------------------------------------------------

11. "ಸೆಲ್" ಎಂಬ ಪದವನ್ನು ಮೊದಲು ಪರಿಚಯಿಸಿದವರು ಯಾರು?

12. ಸಸ್ಯ ಜೀವಕೋಶಕ್ಕೂ ಪ್ರಾಣಿ ಜೀವಕೋಶಕ್ಕೂ ಎರಡು ವ್ಯತ್ಯಾಸ ತಿಳಿಸಿ.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

13. ಪ್ರಾಣಿ ಜೀವಕೋಶದ ಚಿತ್ರ ಬರೆಯಿರಿ.

14. ಒತ್ತಡ ಎಂದರೇನು? ------------------------------------------------------------------------

------------------------------------------------------------------------------------------------

15. ಸ್ಥಾಯಿ ವಿದ್ಯುತ್ ಬಲ ಎಂದರೇನು? ------------------------------------------------------

------------------------------------------------------------------------------------------------

16. ಕೆಲಸ ಎಂದರೇನು? ------------------------------------------------------------------------

------------------------------------------------------------------------------------------------

------------------------------------------------------------------------------------------------

17. ಶಕ್ತಿಯ ಅಂತರಾಷ್ಟ್ರೀಯ ಏಕಮಾನ ತಿಳಿಸಿ. ------------------------------------------------

18. ಶಕ್ತಿ ನಿತ್ಯತೆಯ ನಿಯಮ ಬರೆಯಿರಿ.

------------------------------------------------------------------------------------------------

------------------------------------------------------------------------------------------------

19. ಪ್ರತಿಧ್ವನಿ ಎಂದರೇನು?

------------------------------------------------------------------------------------------------

20. ಮಾನವನ ಕಿವಿಯ ಶಬದಸಂವೇದನೆಯ ಆವೃತ್ತಿಯ ವ್ಯಾಪ್ತಿ ಎಷ್ಟು?

------------------------------------------------------------------------------------------------

**ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.**

**9ನೇ ತರಗತಿ – ಸಾಫಲ್ಯ ಪರೀಕ್ಷೆ : ಮಾದರಿ ಉತ್ತರಗಳು**

---

1. ಮೂಲ ವಸ್ತುಗಳು – ಕಬ್ಬಿಣ, ಬೆಳ್ಳಿ, ತಾಮ್ರದ ತಂತಿ, ಚಿನ್ನ
2. ನೈಟ್ರೋಜನ್ – N    ಕಬ್ಬಿಣ – Fe
3. ಸೋಡಿಯಂನ್ನು ಸೀಮೇಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ, ಏಕೆಂದರೆ ಸೋಡಿಯಂ ಅತ್ಯಂತ ಕ್ರಿಯಾಶೀಲ ಧಾತುವಾಗಿದ್ದು ಅದು ನೀರು ಮತ್ತು ಗಾಳಿಯೊಂದಿಗೆ ವರ್ತಿಸಿ ಸ್ಫೋಟಗೊಳ್ಳುವ ಸಾಧ್ಯತೆ ಇದೆ.
4. ಲೋಹಗಳು ಆಮ್ಲದೊಂದಿಗೆ ವರ್ತಿಸಿ ಬಿಡುಗಡೆಯಾಗುವ ಅನಿಲ – ಹೈಡ್ರೋಜನ್ ($H_2$)
5. ಪರಮಾಣುವಿನ ಆವೇಶ ರಹಿತ ಕಣ – ನ್ಯೂಟ್ರಾನ್
6. ಅಣು : ಪರಮಾಣುಗಳ ಗುಂಪಿಗೆ ಅಣು ಎನ್ನುವರು. (ಸಂಯುಕ್ತದ ಅತ್ಯಂತ ಸೂಕ್ಷ್ಮ ಕಣವೇ ಅಣು)
7. ನೈಟ್ರಿಕ್ ಆಮ್ಲ – $HNO_3$    ಸಲ್ಫ್ಯೂರಿಕ್ ಆಮ್ಲ – $H_2SO_4$
8. ಆಧುನಿಕ ನೀರಾವರಿ ಪದ್ಧತಿಗಳು – ತುಂತುರು ನೀರಾವರಿ ಮತ್ತು ಹನಿ ನೀರಾವರಿ ಪದ್ಧತಿಗಳು
9. ರಾಸಾಯನಿಕ ಗೊಬ್ಬರಗ ಅನಾನಯಕೂಲಗಳು :
10. ಜೀವಕೋಶದ ಶಕ್ತಿ ಉತ್ಪಾದನಾ ಕೇಂದ್ರ – ಮೈಟೋಕಾಂಡ್ರಿಯಾ
    ಮೈಟೋಕಾಂಡ್ರಿಯಾ ಗ್ಲೂಕೋಸ್ನ್ನು ಉತ್ಕರ್ಷಿಸಿ ಶಕ್ತಿಯನ್ನು ಉತ್ಪತ್ತಿ ಮಾಡಿ ಅದನ್ನು ಎ.ಟಿ.ಪಿ ರೂಪದಲ್ಲಿ ಸಂಗ್ರಹಿಸುತ್ತದೆ.
11. "ಸೆಲ್" ಎಂಬ ಪದವನ್ನು ಮೊದಲು ಪರಿಚಯಿಸಿದವರು – ರಾಬರ್ಟ್ ಹುಕ್
12. ಸಸ್ಯ ಜೀವಕೋಶ    ಪ್ರಾಣಿ ಜೀವಕೋಶ

13 ಪ್ರಾಣಿ ಜೀವಕೋಶದ ಚಿತ್ರ :.

14. ಒತ್ತಡ : ಒಂದು ಏಕಮಾನ ವಿಸ್ತೀರ್ಣದ ಮೇಲೆ ಪ್ರಯೋಗವಾಗುವ ಬಲವೇ ಒತ್ತಡ.
15. ಸ್ಥಾಯಿ ವಿದ್ಯುತ್ : ಆವೇಶ ಭರಿತ ವಸ್ತುವು– ಆವೇಶ ಭರಿತ ಅಥವಾ ಆವೇಶ ರಿತ ವಸ್ತುವಿನ ಮೇಲೆ ಪ್ರಯೋಗಿಸುವ ಬಲವೇ ಸ್ಥಾಯಿ ವಿದ್ಯುತ್ ಬಲ.
16. ಕೆಲಸ : ಕಾಯದ ಮೇಲೆ ಬಲ ಪ್ರಯೋಗವಾದಾಗ, ಆ ಕಾಯದ ಸ್ಥಾನ ಬದಲಾದರೆ ಅಲ್ಲಿ ಕೆಲಸ ನಡೆದಿದೆ ಎನ್ನಬಹುದು.
17. ಶಕ್ತಿ ಅಂತರಾಷ್ಟ್ರೀಯ ಏಕಮಾನ – ಜೌಲ್
18. ಶಕ್ತಿ ನಿತ್ಯತೆಯ ನಿಯಮ : ಶಕ್ತಿಯನ್ನು ಸೃಷ್ಟಿಸಲೂ ಸಾಧ್ಯವಿಲ್ಲ, ನಾಶಗೊಳಿಸಲೂ ಸಾಧ್ಯವಿಲ್ಲ. ಆದರೆ ಅದನ್ನು ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಪರಿವರ್ತಿಸಬಹುದು.
19. ಪ್ರತಿಧ್ವನಿ : ವಸ್ತುಗಳ ಮೇಲ್ಮೈ ಮೇಲೆ ಬಿದ್ದ ಶಬ್ದವು ಪ್ರತಿಫಲನದ ನಂತರ ಪುನರಾವರ್ತನೆಯಾಗುವುದನ್ನು ಪ್ರತಿಧ್ವನಿ ಎನ್ನುವರು.
20. ಮಾನವನ ಕಿವಿಯ ಶಬ್ದ ಸಂವೇದನೆಯ ಆವೃತ್ತಿಯ ವ್ಯಾಪ್ತಿ : 20 – 20000 Hz

********************@**********************